ಕರ್ನಾಟಕ ಸರ್ಕಾರ

**ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ. ಮಲ್ಲೇಶ್ವರಂ. ಬೆಂಗಳೂರು-12**

ಸಂಖ್ಯೆ: ಪಮೂಶಿಇ/ಶೈ.ಶಾ- 05/ಪಮುಮುಟಂ/2014-15 ದಿನಾಂಕ: 23-06-2015

## ಸುತ್ತೋಲೆ

**ವಿಷಯ:** ಪ್ರಥಮ ಮತ್ತು ದ್ವಿತೀಯ ಪಿಯುಸಿಯ ಪರಿಷ್ಕೃತ ಪಠ್ಯಪುಸ್ತಕಗಳನ್ನು ಅನುಸರಿಸುವ ಕುರಿತು.
**ಉಲ್ಲೇಖ:** ಇಡಿ 97 ಟಿಪಿಯು 2011, ಬೆಂಗಳೂರು ದಿನಾಂಕ: 07-12-2011

ಮೇಲ್ಕಂಡ ಉಲ್ಲೇಖದನ್ವಯ ಪ್ರಥಮ ಮತ್ತು ದ್ವಿತೀಯ ಪಿಯುಸಿಗೆ ಕ್ರಮವಾಗಿ 2013-14 ಮತ್ತು 2014-15 ನೇ ಶೈಕ್ಷಣಿಕ ಸಾಲಿನಲ್ಲಿ ಹೊಸ ಪಠ್ಯಕ್ರಮಕ್ಕನುಗುಣವಾಗಿ ಇಲಾಖೆಯಿಂದ ಪಠ್ಯಪುಸ್ತಕಗಳನ್ನು ಸಿದ್ದಪಡಿಸಿ ಜಾರಿಗೊಳಿಸಲಾಗಿದೆ. ಪ್ರಥಮ ಪಿಯುಸಿಯ ಪಠ್ಯಪುಸ್ತಕಗಳು 2014-15 ರಲ್ಲಿ ಮತ್ತು ದ್ವಿತೀಯ ಪಿಯುಸಿಯ ಪಠ್ಯಪುಸ್ತಕಗಳು 2015-16 ರಲಿ ಪರಿಷ್ಕೃತಗೊಂಡು ತಿದ್ದುಪಡಿಗಳೊಂದಿಗೆ ಮರುಮುದ್ರಣಗೊಳ್ಳುತ್ತಿವೆ. ಆದುದರಿಂದ ವಿದ್ಯಾರ್ಥಿಗಳು, ಉಪನ್ಯಾಸಕರುಗಳು ಮತ್ತು ಪ್ರಾಂಶುಪಾಲರುಗಳು ಕಲಿಕೆ, ಬೋಧನೆ ಹಾಗು ಮೌಲ್ಯಮಾಪನದ ಎಲ್ಲಾ ಹಂತಗಳಲ್ಲೂ ತಪ್ಪದೆ ಇಲಾಖೆಯು ನಿಗದಿಪಡಿಸಿ ಹೊರತಂದಿರುವ ಪಠ್ಯಪುಸ್ತಕಗಳನ್ನು ಕಡ್ಡಾಯವಾಗಿ ಅನುಸರಿಸಲು ಈ ಮೂಲಕ ಸೂಚಿಸಿದೆ.

ಇಲಾಖೆಯು ನಿಗದಿಪಡಿಸಿ ಹೊರತಂದಿರುವ ಪರಿಷ್ಕೃತ ಪಠ್ಯಪುಸ್ತಕಗಳನ್ನು ಹೊರತುಪಡಿಸಿ ಯಾವುದೇ ಖಾಸಗಿ ಪುಸ್ತಕಗಳನ್ನು ಖರೀದಿಸುವಂತೆ ವಿದ್ಯಾರ್ಥಿಗಳ ಮೇಲೆ ಪ್ರಾಂಶುಪಾಲರು ಮತ್ತು ಉಪನ್ಯಾಸಕರುಗಳು ಒತ್ತಡ ಹೇರಬಾರದು.

ಪ್ರಾಂಶುಪಾಲರುಗಳು ಆರ್. ಆರ್. ನಿಧಿಯಿಂದ 2015-16 ನೇ ಶೈಕ್ಷಣಿಕ ಸಾಲಿಗೆ ಪಠ್ಯಪುಸ್ತಕಗಳನ್ನು ಖರೀದಿಸುವಾಗ ಪ್ರತೀ ವಿಷಯದಲ್ಲಿ ಒಂದು ಪರಿಷ್ಕೃತ ಪಠ್ಯಪುಸ್ತಕವನ್ನು ಕಾಲೇಜಿನ ಗ್ರಂಥಾಲಯಕ್ಕೆ ಖರೀದಿಸಲು ಈ ಮೂಲಕ ಸೂಚಿಸಿದೆ.

ನಿರ್ದೇಶಕರು
ಪದವಿ ಪೂರ್ವ ಶಿಕ್ಷಣ ಇಲಾಖೆ

ಪ್ರತಿಗಳು:

1) ಎಲ್ಲಾ ಜಿಲ್ಲಾ ಉಪನಿರ್ದೇಶಕರುಗಳು
2) ಎಲ್ಲಾ ಕಾಲೇಜುಗಳ ಪ್ರಾಂಶುಪಾಲರುಗಳಿಗೆ- ಸಂಬಂಧಪಟ್ಟ ಜಿಲ್ಲಾ ಉಪನಿರ್ದೇಶಕರುಗಳ ಮೂಲಕ ಮುಂದಿನ ಕ್ರಮಕ್ಕಾಗಿ
3) ಜಂಟಿ ನಿರ್ದೇಶಕರು (ಆಡಳಿತ/ ಪರೀಕ್ಷೆ/ ಮಾನ್ಯತೆ/ಆರ್.ಐ.ಡಿ.ಎಫ್) ಪ.ಮೂ.ಶಿ.ಇ-ಮಾಹಿತಿಗಾಗಿ
4) ಸಹಾಯಕ ನಿರ್ದೇಶಕರು, ಇ-ಆಡಳಿತ ಪ.ಮೂ.ಶಿ.ಇ ಅಂತರ್ಜಾಲದಲ್ಲಿ ಅಳವಡಿಸಲು